31 ವಿದ್ಯುತ್ ಉತ್ಪಾದನೆ ಯೋಜನೆಗಳ ನಿರ್ಮಾಣಕ್ಕೆ ಅನುಮತಿ ನೀಡಿದ್ದು ಇವುಗಳಿಂದ ಒಟ್ಟು 8300 ಮೆ.ವ್ಯಾ ಗಳ ಉತ್ಪಾದನೆಯನ್ನು ಮುಂಬರುವ ವರ್ಷಗಳಲ್ಲಿ ನಿರೀಕ್ಷಿಸಲಾಗಿದೆ.

ಇ) 1997ರ ಮಾರ್ಚ್ ತಿಂಗಳ ಅಂತ್ಯದವರೆಗೆ ವಿದ್ಯುತ್ ಪೂರೈಕೆಗಾಗಿ ರೈತರು ಸಲ್ಲಿಸಿದ್ದ ಅರ್ಜಿಗಳಲ್ಲಿ 103712 ಅರ್ಜಿಗಳು ಬಾಕಿ ಇವೆ. 97-98ನೇ ಸಾಲಿನಲ್ಲಿ 40,000 ಪಂಪುಸೆಟ್ಟುಗಳ ವಿದ್ಯುದೀಕರಣದ ಗುರಿಯನ್ನು ಮಂಡಳಿಯು ನಿಗದಿಪಡಿಸಿದ್ದು ಈ ವರ್ಷದ ಜುಲೈ ಅಂತ್ಯಕ್ಕೆ 8567 ಪಂಪುಸೆಟ್‌ಗಳ ವಿದ್ಯುದೀಕರಿಸಲಾಗಿದೆ. ಉಳಿದ ಪಂಪುಸೆಟ್ಟುಗಳ ನಿಯಮಾನುಸಾರವಾಗಿ ಹಂತ ಹಂತವಾಗಿ ವಿದ್ಯುದೀಕರಿಸಲಾಗುವುದು.

1997-98ರಲ್ಲಿ ಸಾರಾಯಿ ಮಾರಾಟ ಕುರಿತು

2386 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಸಾರಾಯಿ ಮಾರಾಟದ ಹಕ್ಕನ್ನು ಯಾವ ರೀತಿಯಿಂದ ನೀಡಲು ಸರ್ಕಾರವು ತೀರ್ಮಾನಿಸಿದೇ?

ಆ) ಪ್ರತಿ ಅಂಗಡಿಯನ್ನು ಟೆಂಡರ್ ಅಥವಾ ಹರಾಜಿನ ಮೂಲಕ ಡಿಕ್ರಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ? (ವಿವರಗಳನ್ನು ಒದಗಿಸುವುದು)

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) 1997-98ನೇ ಅಬಕಾರಿ ವರ್ಷದಲ್ಲಿ ದಿನಾಂಕ 1.7.97ರಿಂದ 31.7.97ರವರೆಗೆ 1996-97ನೇ ಸಾಲಿನ ಅಬಕಾರಿ ಗುತ್ತಿಗೆದಾರರೇ ಆ ವರ್ಷದ ಬಾಡಿಗೆ ಮೊತ್ತಕ್ಕೆ ಗುತ್ತಿಗೆ ನಿರ್ವಹಿಸಲು ಮುಂದುವರೆಸಲಾಗಿತ್ತು. ದಿನಾಂಕ 1.8.97 ರಿಂದ 31.10.97ರ ಅವಧಿಗೆ ಸಾರಾಯಿ ಚಿಲ್ಲರೆ ಮಾರಾಟದ ಗುತ್ತಿಗೆ ಹಕ್ಕನ್ನು ಹರಾಜು ಮೂಲಕ ವಿಲೇ ಮಾಡಲು ಅನುಮತಿ ನೀಡಿದೆ. ಅಬಕಾರಿ ವರ್ಷದ ಉಳಿದ ಅವಧಿಗೆ ಅನುಸರಿಸಬೇಕಾದ ನೀತಿ ಕುರಿತು ಸಚಿವ ಸಂಪುಟದ ಉಪ ಸಮಿತಿಯ ಪರಿಗಣನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಖಾಸಗಿಯವರಿಗೆ ಅಬಕಾರಿ ಡಿಸ್ಟ್ರಿಬೂಟರ್ಸ್ ಲೈಸನ್ಸ್ ವಿತರಣೆ

2387 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಅಬಕಾರಿ ಡಿಸ್ಟ್ರಿಬ್ಯೂಟರ್ಸ್ ಲೈಸನ್ಸ್ (ಸಿವಿಲ್-2) ಅನ್ನು ಖಾಸಗಿಯವರಿಗೆ ನೀಡಲು ಸರ್ಕಾರವು ನಿರ್ಧರಿಸಿರುವುದು ನಿಜವೇ?